ಸೇರುವ ಅಗತ್ಯವಿಲ್ಲ, ಯಾವುದೇ ಶಾಸ್ತ್ರಾಚಾರವನ್ನು ಅನುಸರಿಸಬೇಕಾದ ಅಗತ್ಯವಿಲ್ಲ... ನೀವು ಇಲ್ಲಿ ಈ ದಿನದಿಂದ ದಂಪತಿಯೆಂದು ನಾನು ಘೋಷಿಸುತ್ತೇನೆ'. ಓದು ಮುಗಿಯುತ್ತಲೇ ಸುಂದ್ರೇಶ ಮೇಷ್ಟರು ಇಬ್ಬರ ಕೈಗಳಲ್ಲೂ ಇದ್ದ ಹಾರಗಳನ್ನು ಹಾಕಿಸುತ್ತಾರೆ. ಉಳಿದವರು ಜೋರಾಗಿ ಚಪ್ಪಾಳೆ ತಟ್ಟುತ್ತಾರೆ. ಕಡೆಗೆ, 'ಇದು ಬಸವ ಕಂಡ ಸಮ ಸಮಾಜದ ಕನಸು,' ಮುಂತಾಗಿ ಮೇಸ್ಟರು ಆಡಿದ ಮಾತುಗಳು ಹೊನ್ನಟ್ಟಾಲಯ್ಯನ ಕಿವಿಗೆ ಬಿದ್ದರೂ ಅವಾವೂ ನಾಟುವ ಸ್ಥಿತಿಯಲ್ಲಿ ಅವನಿರಲಿಲ್ಲ.

ಇಂಥದ್ದೊಂದು ಮದುವೆ ತನ್ನ ಊರಿನಲ್ಲಿ ಅದೂ ಅಡವಪ್ಪನಂಥ ದೈವ ಭಕ್ತನ ಬದುಕಿನಲ್ಲಿ ಸಂಭವಿಸುತ್ತದೆ ಎಂಬುದು ಹೊನ್ನಟ್ಟಾಲಯ್ಯನಿಗಿರಲಿ ಆ ಊರಿನ ಯಾರೊಬ್ಬರ ಅಂದಾಜಿಗೂ ನಿಲುಕದ್ದಾಗಿತ್ತು. ಹೀಗೆ ಕದ್ದುಮುಚ್ಚಿ ಪ್ರೀತಿ ಮಾಡಿ ಓಡೋಗಿ ಒಂದಷ್ಟು ದಿನ ಎಲ್ಲೋ ತಲೆಮರೆಸಿಕೊಂಡು ಕಾವು ಕಡಿಮೆಯಾಗುತ್ತಿದ್ದಂತೆ ಮೆಲ್ಲಗೆ ಮತ್ತೆ ಊರಿನ ದಾರಿ ಹಿಡಿಯುತ್ತಿದ್ದ ಅದೆಷ್ಟೋ ಜೋಡಿಗಳನ್ನು ತನ್ನ ಅರವತ್ತರ ಆಸುಪಾಸಿನ ಬದುಕಿನಲ್ಲಿ ಹೊನ್ನಟ್ಟಾಲಯ್ಯ ನೋಡಿದ್ದ. ಆದರೆ, ಹೀಗೆ ಏಕ್ದಂ ಯಾರಿಗೂ ಕೇರು ಮಾಡದೆ ಅದೂ ಸಾಬರ ಹುಡುಗಿಯನ್ನು ಮದುವೆ ಆಗುತ್ತಿರುವುದು ಹೊನ್ನಟ್ಟಾಲಯ್ಯನಿಗೆ ಕೇಳರಿಯದ ಸಂಗತಿಯಾಗಿತ್ತು. ಹಂಗಾಗಿ ಏನೊಂದೂ ತೋಚದೆ ದಿಕ್ಕೆಟ್ಟು ಹೋಗಿ ಅದನ್ನು ಅಡವಪ್ಪನಿಗೆ ಅರುಹುವ ಸಲುವಾಗಿ ಸೀದಾ ಅಡವಪ್ಪನ ಮನೆಗೆ ಹೋದರೆ ಅಲ್ಲಿ ಬಾಗಿಲಿಗೆ ಬೀಗ ಬಿದ್ದಿತ್ತು. ಆ ಹೊತ್ತಿಗೆ ಊರೆಲ್ಲಾ ಮಲಗಿತ್ತು. ಗಂಟೆ ರಾತ್ರಿ ಹನ್ನೊಂದನ್ನೂ ಮೀರಿತ್ತು. ಅಡವಪ್ಪ ಈಟೊತ್ತಿನಲ್ಲಿ ಮನೆಯಲ್ಲಿ ಇಲ್ಲ ಅಂದ್ರೆ ಕಾಯಮ್ಮಾಗಿ ಗಾಳಿ ಗಂಗವ್ವನ ಮನೆಯಲ್ಲಿ ಇರುತ್ತಾನೆ ಅನ್ನುವುದು ಗೊತ್ತಿದ್ದರೂ ಅಲ್ಲಿಗೆ ಹೋಗಲು ಮನಸಾಗದೆ ಹೆಂಗಿದ್ದರೂ ಬೆಳಗಿನ ಆಟೊತ್ತಿಗೇ ಮನೆಗೆ ಬಂದೇ ಬರುತ್ತಾನೆ ಆಗ ಹೇಳಿದರಾಯ್ತು ಅಂದುಕೊಂಡು ಜಗಲಿಯಲ್ಲಿದ್ದ ಮುರುಕ್ಲು ಮಂದ್ಲಿಕೆ ಚಾಪೆಯನ್ನು ಬಿಡಿಸಿ ಹೆಗಲ ಮೇಲಿದ್ದ ರಗ್ಗನ್ನು ಹೊದ್ದು ಸುಂಟ್ರಿಕೊಂಡಿದ್ದ ಹೊನ್ನಟ್ಟಾಲಯ್ಯ ಕಣ್ಮುಚ್ಚುತ್ತಿದ್ದಂತೇ ಕನಸೊಂದು ಅಮರಿಕೊಂಡಿತ್ತು.

ಆ ಕನಸಿನಲ್ಲಿ... ರಸ್ತೆಗೊಡೆದಿದ್ದ ಕೆಂಪ್ಮಣ್ಣು ತನ್ನ ಕವುಚಿಕೊಳ್ಳುವ ಜಲ್ಲಿಗಾಗಿ ಕಾದೂ ಕಾದು ಕಡೆಗೆ ನವೆದು ಕೆಂಧೂಳಾಗಿ ತನ್ನ ಮೇಲೆ ಹರಿದಾಡುವ ಸಕಲಕ್ಕೂ ತನ್ನಿರುವನ್ನು ಸಾರುತ್ತಾ ತಿಂಗಳುಗಳೇ ಕಳೆದೋಗಿದ್ದವು. ಅಂಥದ್ದರ ಮೇಲೆ ಅದೊಂದು ಧೂಳ್ಸಂಜೆಯಲ್ಲಿ ಜೀಪೊಂದು ನುಗ್ಗಿದ ರಭಸಕ್ಕೆ ಹಾದಿಬೀದೀಲಿ ಆಡಿಕೋತಿದ್ದ ಮಕ್ಳು ಮರಿ ಅದರ ಹಿಂದ್ಗುಂಟ ಒಂದೋಟ್ ದೂರ ಓಡೋಡಿ ಏದುಸಿರು ಬಿಡುತ್ತಾ ಆ ಧೂಳಲ್ಲಿ ಒಡಮೂಡಿದ ನಡೆದಾಡುವ ಚಿತ್ರಗಳಂತೆ ರಸ್ತೆ ಪಕ್ಕದಲ್ಲಿ ಅಲ್ಲಲ್ಲಿ ಗುಡ್ಡಾಕಿದ್ದ ಜಲ್ಲಿ ಗುಡ್ಡೆಗಳನ್ನತ್ತಿ ಚೋಜಿಗದಲ್ಲಿ ನಿಂತಿದ್ದವು. ಹಾಗೆ ಹೋದ ಆ ಜೀಪು ಪೊಲೀಸ್ ಜೀಪಾಗಿದ್ದು ಅದು ಸೀದಾ ಹುಡುಸ್ಲೇಗೌಡನ ಮನೆಯ ಮುಂದೆ ನಿಂತಿತ್ತು. ಅದರೊಳಗಿಂದಿಳಿದ ಪೊಲೀಸರು ಗೌಡನನ್ನೂ ಅವನ ಮಗ ವೀರಭದ್ರನನ್ನೂ ಜೀಪಿಗೆಸಕಂಡು ಸೀದಾ ಖಾಸಿಂ ಸಾಬರ ಗುಡ್ಲು ಮನೆಯತ್ತ ಹೋಗಿತ್ತು. ಅಲ್ಲಿ ಖಾಸಿಂ ಸಾಬರ ಕಳೇಬರ ಇನ್ನೂ ಮನೆ ಎದುರಿನ ಬುಗುರಿ ಮರದಲ್ಲಿ ನೇತಾಡುತ್ತಿತ್ತು. ಊರಿಗೂರೇ ನೆರೆದಿದ್ದ ಅಲ್ಲಿ ಖಾಸಿಂ ಸಾಬರ ಮನೆ ಮಂದಿಯೆಲ್ಲಾ ಎದೆ ಬಡುಕಂಡು ಗೋಳೋ ಅನ್ನುತ್ತಿದ್ದರು. ಅಲ್ಲಿಂದ ಸೀದಾ ಹೊರಟ ಜೀಪು ಅಡವಪ್ಪನ ಮನೆಯತ್ತ ಹೊರಟು ಇನ್ನೇನು ತೋಟದೊಳಕ್ಕೆ ನುಗ್ಗಬೇಕು ಅನ್ನುವಾಗ ಬೇಲಿಯ ವಾರಾಸಿಗಿದ್ದ ಮೂಗುತ್ತದ ಕಡೆಯಿಂದ ಮಾಮೇರಿ ಸದ್ದೊಂದು ಎದ್ದ ಪರಿಗೆ ಜೀಪನ್ನು ನಡೆಸುತ್ತಿದ್ದವನು ದಂಗೊಡೆದು ಜೀಪನ್ನಲ್ಲೇ ನಿಲ್ಲಿಸಿದ್ದ. ಹಂಗೇ ನಿಲ್ಲಿಸಿದವನೇ ಸದ್ದು ಬಂದತ್ತ ನೋಡಿದರೆ ಮೂಗುತ್ತದೊಳಗಿಂದ ಆಳು ಗಾತ್ರದ ಹೆಬ್ಬಾವೊಂದು ನೆಟ್ಟಗೆ ತುದಿ ಬಾಲದವರೆಗೂ ನಿಮಿರಿ ನಿಂತು ಬುಸುಗುಡುತ್ತಿತ್ತು. ಹಾಗೆ ಬುಸುಗುಡುತ್ತಾ ನಿಂತಿದ್ದ ಆ ಹಾವು ಬಾಲದಲ್ಲೇ ನಡಕಂಡು ಜೀಪಿನತ್ತಿರಕ್ಕೆ ಬಂದು ಜೀಪಂಥ ಜೀಪನ್ನೆಲ್ಲಾ ಒಮ್ಮೆ ಬಳಸಿ ನುಲುಕೊಂಡು ಮೈ ಮುರಿಯುತ್ತಲೇ ಪೂರಾ ಜೀಪೆಲ್ಲಾ ನಜ್ಜುಗುಜ್ಜಾಗಿ